



# ಬಿಂದಿಗೆ

ಕಟ್ಟೆಯ ಮೇಲಿಟ್ಟಿದ್ದೆ ಬಿಂದಿಗೆ
ಕಟ್ಟಿಡಬೇಕೆಂದೇನಿದೆ?
ಮನೆ ನಮ್ಮದೇ
ಬಾವಿಯೂ ನಮ್ಮದೇ
ಹಿತ್ತಿಲು ಗೋಡೆ ಪಾಗಾರ
ಗಳೆಲ್ಲವೂ ನಾವು ಕಟ್ಟಿದ್ದೇ
ಕದ ಕಿಟಕಿಗಳನೆಲ್ಲ ಮುಚ್ಚಿ
ಮಲಗಿದ ವೇಳೆ ಅಪರಾತ್ರಿ
ಏನದು ಸದ್ದು?
ಬೆಚ್ಚಿಬಿದ್ದಿದ್ದೆ ಎದ್ದು
ಗಾಳಿಮಳೆಯಿಲ್ಲ
ಗುಡುಗು ಸಿಡಿಲಿಲ್ಲ
ಚಂಡಮಾರುತದ ಸುಳಿವೂ ಇರಲಿಲ್ಲ
ಬಿದ್ದಿದ್ದು ಬಿಂದಿಗೆಯೇ?
ಅದೂ ಬಾವಿಗೇ?
ಯಾರಿಗಿತ್ತು ಈ ವೇಳೆ
ಅಂಥ ಬಾಯಾರಿಕೆ?
ಕವಿದ ಕತ್ತಲ ಮಧ್ಯೆ
ಕೊಡದ ಕಂಠಕ್ಕೆ
ಬಿಗಿಯಬಾರದಿತ್ತೆ ಉರುಳ
ನಯವಾಗಿ
ಬಾಹುಗಳು ಹರಿದಾಡಿ
ಮೈತುಂಬ ಸರಿದಾಡಿ
ಬಿಡಬಾರದಿತ್ತೆ ಬಿಂದಿಗೆಯ
ಬಾವಿಯಾಳಕ್ಕೆ ಹದನಾಗಿ
ಎತ್ತಬಾರದಿತ್ತೆ ನವಿರಾಗಿ
ತುಂಬಿಯೋ ತುಂಬದೆಯೋ
ಒದ್ದೆಯಾಗಿಸಲಿಕ್ಕೆ
ಒಗೆದವನ ತುಟಿಯ
ಮತ್ತೆದೆಯ ಆಳದಲಿ
ಬಿಟ್ಟರೀ ಬಿಂದಿಗೆಯ
ಕಲಕೀತು ತಿಳಿನೀರು
ಕದಡಿ ಹರಡೀತು ಕಿಲುಬು
ಹಿಡಿಯಲಾದರೂ ನೀರ ಜರಡಿ
ಹುಡುಕಬೇಕಲ್ಲ ಒಂದು
ಪಾತಾಳಗರಡಿ.

● **ಸಹನಾ ಹೆಗಡೆ**